ವೈಶಿಷ್ಟ್ಯ ಇರುವುದು ಅವು ಉದ್ದವಾಗಿದೆಯೆಂದು ಅಲ್ಲ. ಅವುಗಳ ಒಳಾಂಗಣವನ್ನು ನೀವು 'ಕಸ್ಟಮೈಸ್' ಮಾಡಬಹುದು ಎಂಬ ಕಾರಣಕ್ಕೆ. ಅಂದರೆ ಒಳವಿನ್ಯಾಸವನ್ನು ನಿಮಗೆ ಬೇಕಾದಂತೆ ಹೇಳಿ ಕಂಪೆನಿಗಳಿಂದಲೇ ಮಾಡಿಸಿಕೊಳ್ಳಬಹುದು.

ರೇಂಜ್‌ರೋವರ್ ಆಟೊಬಯೋಗ್ರಫಿ ಎಲ್‌ಡಬ್ಲ್ಯುಬಿ 2015ರಲ್ಲೇ ಭಾರತದ ಮಾರುಕಟ್ಟೆಗೆ ಕಾಲಿಟ್ಟಿತು. ಆದರೆ ಹೆಚ್ಚು ಸುದ್ದಿಯಾಗಿದ್ದು ಅಮಿತಾಭ್ ಬಚ್ಚನ್ ಅದನ್ನು ಖರೀದಿಸಿದಾಗ. ಬಿಗ್ ಬಿ ಖರೀದಿಸಿದ್ದು ರೇಂಜ್‌ರೋವರ್ ಆಟೊಬಯೋಗ್ರಫಿ ಎಲ್‌ಡಬ್ಲ್ಯುಬಿಯ 'ಬ್ಲ್ಯಾಕ್' ಅವತರಣಿಕೆಯನ್ನು. 'ಬ್ಲ್ಯಾಕ್'ಗೂ ಎಸ್‌ಯುವಿಯ ಬಣ್ಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ. ಆದರೆ ಬ್ಲ್ಯಾಕ್ ಅವತರಣಿಕೆಯಲ್ಲಿ 'ಕಸ್ಟಮೈಸ್'ನ ಅವಕಾಶಗಳು ಹೆಚ್ಚು ಇರುತ್ತವೆ. ಅಮಿತಾಭ್ ಬಚ್ಚನ್ ಆರಿಸಿಕೊಂಡಿದ್ದ ಅವತರಣಿಕೆಯಲ್ಲಿ ಒಳಾಂಗಣದಲ್ಲಿ ಬಳಸಿರುವ ಲೆದರ್ ಅನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು. ಅಲ್ಲದೆ ಲೆದರ್‌ನ ಬಣ್ಣ ಮತ್ತು ಹೊಲಿಗೆಯ ವಿನ್ಯಾಸವನ್ನೂ ಆಯ್ಕೆ ಮಾಡಿಕೊಳ್ಳಬಹುದಿತ್ತು. ಅಲ್ಲದೆ ಆ ಅವತರಣಿಕೆಯ ಟೇಲ್ ಲ್ಯಾಂಪ್‌ಗಳೂ ವಿಶಿಷ್ಟವಾಗಿದ್ದವು. ಅಲ್ಲದೆ ಈ ಅವತರಣಿಕೆಗಳನ್ನು ಬುಕ್ ಮಾಡಿದ ನಂತರವೇ ತಯಾರು ಮಾಡುತ್ತಿದ್ದದ್ದು. ಜತೆಗೆ ಒಳಾಂಗಣ ಪೂರ್ತಿ 'ಹ್ಯಾಂಡ್‌ಮೇಡ್'. ವಿಶ್ವದಾದ್ಯಂತ ಕೆಲವೇ ನೂರು ಆಟೊಬಯೋಗ್ರಫಿ ಎಲ್‌ಡಬ್ಲ್ಯುಬಿಗಳು ಮಾರಾಟವಾಗಿವೆ.

ಇಂಥದ್ದೇ ಆಯ್ಕೆಯನ್ನು ಮರ್ಸಿಡೆಸ್ ಬೆಂಜ್ ಸಹ ತನ್ನ ಕೆಲವು ಆಯ್ದ ಮಾದರಿಗಳ ಖರೀದಿಯ ವೇಳೆ ನೀಡುತ್ತದೆ. ಅಲ್ಲಿ ಹೊರಾಂಗಣದ ಬಣ್ಣ, ಒಳಾಂಗಣದ ಬಣ್ಣ, ಲೆದರ್ ಆಯ್ಕೆಯ ಅವಕಾಶಗಳನ್ನು ಬೆಂಜ್ ನೀಡುತ್ತದೆ. ರೋಲ್ಸ್ ರಾಯ್ಸ್ ಸಹ ಅಂತಹ ಅವಕಾಶವನ್ನು ನೀಡುತ್ತದೆ. ಕೋಟಿ ಎಂಬುದು ನಗಣ್ಯ ಎಂದಾಗಿದ್ದರೆ, ಅಷ್ಟು ಹಣ ನಿಮ್ಮಲ್ಲಿದ್ದರೆ ನಿಮಗೆ ಬೇಕಾದಂತೆ ಹೊಸತೇ ಕಾರನ್ನು ರೋಲ್ಸ್‌ರಾಯ್ಸ್ ವಿನ್ಯಾಸ ಮಾಡಿಕೊಡುತ್ತದೆ.






ಇವೆಲ್ಲಾ ದುಡ್ಡಿದ್ದವರ ಮಾತಾಯಿತು. ಐಷಾರಾಮಿ ಕಾರು ತಯಾರಕರಷ್ಟೇ ತಮ್ಮ ಗ್ರಾಹಕರಿಗೆ ಕಸ್ಟಮೈಸ್ ಸೇವೆ ನೀಡುತ್ತಿದ್ದಾರೆ. ಜನಸಾಮಾನ್ಯರಿಗೆ ಅಂತಹ ಅವಕಾಶ ಸಿಗುವಂತಿದ್ದರೆ..?

ಏಕೆಂದರೆ ಭಾರಿ ದುಡ್ಡು ಚೆಲ್ಲಿ, ಎಲ್ಲಾ ಸವಲತ್ತು ಇರುವ ಕಾರುಗಳನ್ನು ಖರೀದಿಸುವುದು ಜನಸಾಮಾನ್ಯರಿಗೆ ಕಷ್ಟಸಾಧ್ಯದ ಕೆಲಸ. ಹೀಗಾಗಿ ಕೊಂಡ ಕಾರಿನಲ್ಲಿ ಏನಾದರೊಂದು ಕೊರತೆ ಕಾಡುತ್ತಿರುತ್ತದೆ. ಕೊಂಡ ನಂತರ ಆ ಅವತರಣಿಕೆ ಖರೀದಿಸಬೇಕಿತ್ತು, ಈ ಅವತರಣಿಕೆ ಖರೀದಿಸಬೇಕಿತ್ತು ಎಂದು ಕೈ ಕೈ ಹಿಸುಕಿಕೊಳ್ಳುವವರ ಸಂಖ್ಯೆ ಚಿಕ್ಕದೇನಲ್ಲ.

ಈ ಕೊರತೆಗಳೇ ಹುಟ್ಟುಹಾಕಿರುವ 'ಆಫ್ಟರ್ ಮಾರ್ಕೆಟ್ ಮಾಡಿಫಿಕೇಷನ್' ಮಾರುಕಟ್ಟೆಯ ವಹಿವಾಟಿನ ಗಾತ್ರವನ್ನು ಕಾರು ತಯಾರಿಕಾ ಕಂಪನಿಗಳೂ ಈಗ ಮನವರಿಕೆ ಮಾಡಿಕೊಂಡಂತಿದೆ. ಹೀಗಾಗಿಯೇ ಜನಸಾಮಾನ್ಯರ ಕಾರುಗಳಿಗೂ 'ಕಸ್ಟಮೈಸ್' ಸೇವೆ ಕಲ್ಪಿಸಲು ಭಾರತದ್ದೇ ಕಂಪನಿಗಳು ಸಿದ್ಧತೆ ನಡೆಸಿವೆ.

ಅಂತಹದ್ದೊಂದು ಸೇವೆಯನ್ನು ಆರಂಭಿಸುತ್ತೇವೆ ಎಂದು ಮೊದಲು ಘೋಷಿಸಿದ್ದು ಟಾಟಾ ಮೋಟಾರ್ಸ್. ಬಿಡುಗಡೆಯ ಹೊಸ್ತಿಲಲ್ಲಿರುವ ಟಾಟಾ ಹ್ಯಾರಿಯರ್ ಎಸ್‌ಯುವಿಯನ್ನು ಗ್ರಾಹಕರು ಕಸ್ಟಮೈಸ್ ಮಾಡಿಕೊಳ್ಳಬಹುದು ಎಂದು ಟಾಟಾ ಮೋಟಾರ್ಸ್ (ಟಿಎಂಎಲ್) ಅಧಿಕೃತವಾಗಿ ಘೋಷಿಸಿದೆ. ಯಾವ ಮಟ್ಟದಲ್ಲಿ ಕಸ್ಟಮೈಸ್ ಮಾಡಿಕೊಳ್ಳಲು ಅವಕಾಶವಿದೆ ಎಂಬುದನ್ನು ಟಾಟಾ ಇನ್ನೂ ಅಧಿಕೃತವಾಗಿ ಹೇಳಿಲ್ಲ. ಆದರೆ, 'ಬರೀ ಒಳ–ಹೊರ ಬಣ್ಣಗಳ ಆಯ್ಕೆಯಷ್ಟೇ ಇದರಲ್ಲಿ ಇರುವುದಿಲ್ಲ. ಬದಲಿಗೆ ವಿವಿಧ ಸವಲತ್ತುಗಳನ್ನು ಆಯ್ಕೆ ಮಾಡಿಕೊಳ್ಳಬಹುದು' ಎಂದಷ್ಟೇ ಟಿಎಂಎಲ್ ಹೇಳಿಕೆಯಲ್ಲಿ ತಿಳಿಸಿದೆ.

'ಎಂಜಿನ್– ಗಿಯರ್‌ಬಾಕ್ಸ್– 4x4 ಡ್ರೈವಿಂಗ್ ಸಿಸ್ಟಂಗಳ ಸಂಯೋಜನೆಯಲ್ಲೂ ಕಸ್ಟಮೈಸೇಷನ್ ಅವಕಾಶವಿದೆ. ಸೀಟ್‌ಗಳ ಆಯ್ಕೆ, ಇನ್ಫೊಟೈನ್‌ಮೆಂಟ್ ಸಿಸ್ಟಂ, ಪ್ರೊಜೆಕ್ಟರ್ ಹೆಡ್‌ಲ್ಯಾಂಪ್, ಸನ್‌ರೂಫ್ ಮತ್ತು ಮ್ಯಾಗ್‌ವ್ಹೀಲ್‌ಗಳನ್ನು ಯಾವುದೇ